ನಗರ ಅವಳಿಗೆ ಅಷ್ಟೇನೂ ಪರಿಚಿತವಾಗಿರಲಿಲ್ಲ. ನಗರದ ನೆನಪುಗಳು ಅವಳ ಮನದೊಳಗೆ ಚುಚ್ಚುತ್ತಿರುವ ಒಂದು ಮುಳ್ಳಿನಂತಾಗಿತ್ತು.

ಅಲ್ಲಿಲ್ಲಿ ಮಾತ್ರ ಹಸಿರುಹುಲ್ಲು ಉಳಿದುಕೊಂಡಿದ್ದ ಬೇಸಿಗೆಯ ಆರಂಭದ ದಿನಗಳ ಮೈದಾನವಾಗಿತ್ತದು. ಅದರ ಸುತ್ತಲೂ ಮರೆಮಾಡಲು ಸಾಧ್ಯವಾಗದ ಕಲ್ಲುಗೋಡೆ.

ಆ ಕಲ್ಲುಗೋಡೆಗಳಿಗೂ ಮೊದಲು, ತುಂಡುಮರದ ಕೊಂಬುಗಳ ನೆರಳಲ್ಲಿ ಕಾಣುತ್ತಿದೆ ಆ ನಗುತ್ತಿರುವ ಮುಖ. ಎಲ್ಲೋ ನೋಡಿಯೂ ಮರೆತುಹೋದ ಮುಖ. ಕತ್ತಲ ಮೊಗಸಾಲೆಯ ಮೂಲಕ ಒಂದು ದೀಪದಂತೆ ಹಾದು ಬರುತ್ತಿರುವಂಥ ನೋಟ.

ಅದಕ್ಕಾಗಿಯೇ ಇರಬೇಕು ಆ ನಗರದ ಉಳಿದ ಬೀದಿಗಳ್ಯಾವುದನ್ನು ಅವಳು ನೋಡಿರಲಿಲ್ಲ. ಮತ್ಯಾವ ಮುಖಚರ್ಯೆಯನ್ನು ನೆನಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಉಳಿದ ಬೆಳಕುಗಳು ಅವಳಿಗೆ ಅಜ್ಞಾತವಾಗಿದ್ದವು. ನಗರಕ್ಕೆ ಹಲವು ಮುಖಗಳು, ಹಲವು ಕಣ್ಣುಗಳು, ಹಲವು ಬೆಳಕುಗಳು, ಹಲವು ಬಣ್ಣಗಳು, ಹಲವು ಶಬ್ದಗಳು ಇವೆಯೆಂದು ಅವಳಿಗೆ ಗೊತ್ತಿರಲಿಲ್ಲ.

ಸಮಾನಾಂತರವಾದ ಎರಡು ಬೀದಿಗಳ ನಡುವೆ ಮುಳ್ಳಿನ ಮರಗಳು ಮಾತ್ರ ಉಳಿದುಕೊಂಡಿದ್ದ ಹಳೆ ತೋಟ. ಅದು ಮಾತ್ರ ಅಂದಿಗೂ ಇಂದಿಗೂ ಒಂದೇ ತರಹ.

ಹಲವು ವರ್ಷಗಳ ನಂತರ ಅದೇ ರಸ್ತೆಗಳ 'ಕೂಡುಸ್ಥಳ'ಕ್ಕೆ ಅವಳೀಗ ಬಂದು ತಲುಪಿದ್ದಾಳೆ. ಜೊತೆಯಲ್ಲಿ ಮದುಮಗ. ಅವರ ಹಿಂದೆ ಒಂದು ಮನೆಗೆ ಬೇಕಾಗುವಷ್ಟು ಸಾಮಾನುಗಳ ಭಾರವನ್ನು ಹೊತ್ತ ಗಾಡಿಯೂ ಇದೆ.

ರಸ್ತೆಯ ಎರಡೂ ಕಡೆಗಳಲ್ಲಿ ಒಂದಕ್ಕೊಂದು ಸೇರಿಕೊಂಡಿದ್ದ ಹಳೆ ಅಂಗಡಿ ಕಟ್ಟಡಗಳು ಅಂದು ಅವಳ ಕಣ್ಣುಗಳಿಗೆ ಬಿದ್ದಿರಲಿಲ್ಲ. ಮುಂಭಾಗದ ಸಾಲು ಸಾಲಾದ ಹಲಗೆಗಳು ಮುಚ್ಚಿಕೊಂಡು ಮೌನವನ್ನು ಪಾಲಿಸುತ್ತಿದ್ದವು. ಬೆಳಕು ತನ್ನ ಮಬ್ಬಾದ ಕಣ್ಣುಗಳಿಂದ ತನ್ನನ್ನು ಗುರ್ತಿಸುತ್ತಿದೆಯೇನೊ ಎಂದವಳಿಗೆ ಅನಿಸಿತು.

''ಇಂದು ಭಾನುವಾರ.''

''ಭಾನುವಾರ ಗೃಹಪ್ರವೇಶಕ್ಕೆ ಪ್ರಶಸ್ತವಾದ ದಿನವೇನು?...''

''ಬಾಡಿಗೆಮನೆಗೆ ವಾಸಕ್ಕೆ ಹೋಗುವಾಗ ಮುಹೂರ್ತಗಳನ್ನು ನೋಡುವ ಅವಶ್ಯಕತೆ ಇಲ್ಲ.''

ಮಧ್ಯಾಹ್ನದ ಕಾವೇರಿಸಿಕೊಂಡ ಬೇಸಿಗೆ ಕಾಲದ ಒಂದು ಪ್ರಾತಃಕಾಲ.

ಬಿಸಿಯನ್ನು ಅವಗಣಿಸಿ, ಬಿಸಿಲನ್ನು ಶಿರಗಳಿಗೆ ಅಲಂಕರಿಸಿಕೊಂಡು ಮನುಷ್ಯರು ಅವಸರವಸರದಿಂದ ಆಚೀಚೆ ಸಾಗುತ್ತಿದ್ದಾರೆ. ಗಂಡಸರೂ ಹೆಂಗಸರೂ. ಅವರ ಕೈಗಳಲ್ಲಿ ಕಪ್ಪು ಬೈಂಡಿಂಗ್‌ನ ಪುಸ್ತಕಗಳಿದ್ದವು. ಒಂದು ವಾರದ ಅತ್ಯಂತ ಕೊನೆಯ ಕೆಲಸ ಮುಗಿಸಿ ಮನೆಗೆ ಹಿಂತಿರುಗುವ ಅವಸರ, ನಗುತ್ತಿರುವ ನಿಷ್ಕರುಣೆಯ ಬಿಸಿಲ ನಗು. ಆ 'ಕೂಡುಸ್ಥಳ'ದಿಂದ ಕಾರು ನಗರದ ಗಡಿಯ ಕಡೆಗೆ ತಿರುಗಿತು. ಭೋರ್ಗರೆಯುವ ಕಡಲಿನ ನೇರಕ್ಕೆ.

ನಗರದ ಶಿಖರದ ಹತ್ತಿರ ಚದುರಿ ನಿಂತಿರುವ ತೆಂಗಿನ ಮರಗಳ ಕೆಳಗೆ ಹುದುಗಿಕೊಂಡಂತಿರುವ ಒಂದು ದೊಡ್ಡಮನೆ. ಬೃಹತ್ತಾದ ಮನೆಯನ್ನೂ ಅದರ ಹಳೆಯತನವನ್ನೂ ನೋಡಿದ ಅವಳಿಗೆ ಆಶ್ಚರ್ಯವೆನಿಸಿತು.

ದಾರಿಯುದ್ದಕ್ಕೂ ಗಂಡ ಬಹಳ ಆಸಕ್ತಿಯಿಂದ ಈ ಮನೆಯ ಬಗ್ಗೆ ಹೇಳಿಕೊಂಡು ಬರ್ತಾ ಇದ್ದ.

ಅದೊಂದು ಮನೆಯೆಂದು ಅನಿಸದೆ, ಕೋಟೆಯಂತೆ ಅವಳಿಗೆ ಅನಿಸಿತು. ಸುತ್ತಲೂ ದೊಡ್ಡ ಕಲ್ಲಿನ ಗೋಡೆ. ನಡುವಿನಿಂದ ಹಾದು ಹೋಗಲು ಅಗಲವಾದ ದಾರಿ. ಆ ದಾರಿಯಿಂದ ಮನೆಯ ಆವರಣದೊಳಕ್ಕೆ ಹೋಗಲು ಅಳವಡಿಸಿರುವ ಬೃಹತ್ತಾದ ಕಬ್ಬಿಣದ ಗೇಟು. ಗೇಟಿನ ತಗಡಿನ